**ಭಾರತೀಯ ಜನತಾ ಪಾರ್ಟಿ**

**ಕೇಂದ್ರ ಕಚೇರಿ**

**11, ಅಶೋಕ ರಸ್ತೆ, ನವದೆಹಲಿ–110001**

**Phone-011-23005700, Fax-011-23005787**

ದಿನಾಂಕ: ಫೆಬ್ರವರಿ 15,2013

**ಭಾಜಪ ರಾಷ್ಟ್ರೀಯ ವಕ್ತಾರ ಹಾಗೂ ಸಂಸದ,**

**ಶ್ರೀ ಪ್ರಕಾಶ್ ಜಾವ್ಡೇಕರ್ ನೀಡಿದ ಪತ್ರಿಕಾ ಪ್ರಕಟಣೆ**

**12 ಎಡಬ್ಲ್ಯು101 ಹೆಲಿಕಾಪ್ಟರ್ ಖರೀದಿಯ 3,500 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ನಡೆದಿದೆ ಎನ್ನಲಾದ ಲಂಚ ಸ್ವೀಕಾರ ಪ್ರಕರಣದಲ್ಲಿ ನ್ಯಾಯಾಲಯ ಉಸ್ತುವಾರಿಯೊಂದಿಗೆ ಸಿಬಿಐ ತನಿಖೆ ನಡೆಯಬೇಕು ಎಂದು ಭಾಜಪ ಆಗ್ರಹಿಸುತ್ತದೆ. ಯುಪಿಎ ಆಳ್ವಿಕೆಯಲ್ಲಿ ಸಿಬಿಐ ತನಿಖೆ ಪ್ರಯೋಜನಬಾರದ ಕಾರಣ, ನ್ಯಾಯಾಲಯದ ಉಸ್ತುವಾರಿ ಆವಶ್ಯಕವಾಗಿದೆ.**

2ಜಿ ವಂಚನೆಯ ಬೃಹತ್ ಪ್ರಕರಣದಲ್ಲಿ, ಕಾಂಗ್ರೆಸ್ ಜನಾಭಿಪ್ರಾಯಕ್ಕೆ ಮಣಿದು ತನಿಖೆಗೆ ಆದೇಶಿಸಿತ್ತು, ಆದರೆ ನಂತರ, ವಿಚಾರಣೆಯಲ್ಲಿ ವಿಳಂಬ ತಂತ್ರವನ್ನು ಅನುಸರಿಸಿತ್ತು. ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಣೆಯಿಂದ 2ಜಿ ಹಗರಣದ ಮೇಲ್ವಿಚಾರಣೆ ವಹಿಸಿದ ನಂತರವೇ, ವಿಚಾರಣೆಯಲ್ಲಿ ಸಂಚಲನವುಂಟಾಗಿ ಪ್ರಗತಿ ಕಂಡಿತು, ಇಲ್ಲವಾದರೆ, ಸುಮಾರು 15 ತಿಂಗಳವರೆಗೂ ಹಗರಣದ ವಿಚಾರಣೆ ನೆನೆಗುದಿಗೆ ಬಿದ್ದಿತ್ತು.

ವಿವಿಐಪಿ ಹೆಲಿಕಾಪ್ಟರ್ ಹಗರಣ ಬಹಿರಂಗಗೊಂಡು ಲಂಚದ ವಿಚಾರವು ಭಾರತ ಮತ್ತು ಇಟಲಿಯ ಮಾಧ್ಯಮಗಳಲ್ಲಿ ಒಂದು ವರ್ಷಗಳ ಹಿಂದೆಯೇ ವರದಿಯಾಗಿದ್ದರೂ, ಸರ್ಕಾರ ಈ ಕುರಿತು ಸೂಕ್ತ ತನಿಖೆಗೆ ಆದೇಶ ನೀಡಲು ಮೀನಮೇಶ ನೋಡುತ್ತಿತ್ತು ಎಂದು ಭಾಜಪ ಆಪಾದನೆಯಾಗಿದೆ.

ನಂತರ, ಇಟಲಿಯ ಸರ್ಕಾರ ಈ ಹಗರಣದ ಕುರಿತು ಗಂಭೀರವಾಗಿ ತನಿಖೆ ಆರಂಭಿಸಿದರೂ, ಭಾರತ ಸರ್ಕಾರ ಈ ದಿಕ್ಕಿನಲ್ಲಿ ಪ್ರಾಮಾಣಿಕ ತನಿಖೆ ನಡೆಸಲು ಯಾವುದೇ ಆಸಕ್ತಿ ವಹಿಸದೆ ಮೌನ ಸಾಧಿಸಿತ್ತು. ಸತ್ಯ ಹೇಳಬೇಕೆಂದರೆ, ಮಾಧ್ಯಮ ವರದಿಗಳ ಅನುಸಾರ, ಈ ವಹಿವಾಟಿನಲ್ಲಿ ಯಾವುದೇ ಹಗರಣ ನಡೆದಿಲ್ಲ ಎಂಬ ನಿರ್ಧಾರವನ್ನು ತೆಗೆದುಕೊಳ್ಳುವ ಇಂಗಿತವನ್ನು ಸರ್ಕಾರದ ಆಂತರಿಕ ವಿಚಾರಣೆ ಹೊಂದಿತ್ತು. **ರಕ್ಷಣಾ ಸಚಿವಾಲಯದ ಆಂತರಿಕ ವಿಚಾರಣೆಯ ವಿವರಗಳನ್ನು ಬಹಿರಂಗ ಪಡಿಸುವಂತೆ ಹಾಗೂ ಯಾವುದೇ ಅವ್ಯವಹಾರ ನಡೆದಿಲ್ಲ ಎಂಬ ನಿರ್ಧಾರಕ್ಕೆ ಬರಲು ಕಾರಣವೇನು ಎಂಬುದನ್ನು ತಿಳಿಸುವಂತೆ ಭಾಜಪ ಒತ್ತಾಯಿಸಿದೆ.**

**ಸ್ವಾರಸ್ಯಕರ ಸಂಗತಿಯೆಂದರೆ, ರಾಜ್ಯ ಸಭೆಯಲ್ಲಿ ಡಿಸೆಂಬರ್ 12, 2012ರಂದು ನಾನು ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸರ್ಕಾರ, ಆಂತರಿಕ ವಿಚಾರಣೆ ನಡೆಸಿದ ಮಾಹಿತಿಯನ್ನೇ ನೀಡಿರಲಿಲ್ಲ.** ಆ ಉತ್ತರದಲ್ಲಿ

ಅಸಹಾಯಕತೆಯ ಭಾವನೆ ವ್ಯಕ್ತಪಡಿಸಿದ ಸರ್ಕಾರ, ನಿಖರ ಮಾಹಿತಿಯ ಕೊರತೆಯ ಕಾರಣ, ಸರ್ಕಾರದ ಯಾವುದೇ ಸಂಘಟನೆಯು ಅಧಿಕೃತವಾದ ತನಿಖೆಯನ್ನು ಆರಂಭಿಸಲು ಸಾಧ್ಯವಾಗಿಲ್ಲ ಎಂದಿತ್ತು. ವಾಸ್ತವವಾಗಿ, ಇಟಲಿಯಿಂದ ಯಾವುದೇ ಅಧಿಕೃತ ಸಂದೇಶ ಬರದೇಯಿದ್ದರೂ ಕೂಡ, ಮೂಲಗಳಿಂದ ಪಡೆಯಬಲ್ಲ ಮಾಹಿತಿಗಳನ್ನು ಆಧರಿಸಿ ಸರ್ಕಾರ ತನಿಖೆ ಆರಂಭಿಸಬಹುದಿತ್ತು.

ಆರೋಪಿಗಳಾದ ಹಾಸ್ಚ್ಕೆ ಹಾಗೂ ಅತನ ಸಹವರ್ತಿ ಗೆರೊಸ ಅವರ ನಡುವೆ ಸಂಭವಿಸಿದೆ ಎನ್ನಲಾದ ಸಂಭಾಷಣೆಯ ಧ್ವನಿ ಮುದ್ರಣದ ರೂಪಾಂತರವು ಕಳೆದ ನಾಲ್ಕು ತಿಂಗಳುಗಳಿಗಿಂತ ಹೆಚ್ಚಿನ ಅವಧಿಯವರೆಗೂ ಸಾರ್ವಜನಿಕ ವಲಯದಲ್ಲಿ ಲಭ್ಯವಿತ್ತು. ಭಾರತ ಸರ್ಕಾರ ಈ ಮಾಹಿತಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಗೋಜಿಗೆ ಹೋಗಲಿಲ್ಲ.

ಕುಖ್ಯಾತ ಹಗರಣದ ತನಿಖೆ ಕುರಿತು ಸರ್ಕಾರ ಅಸಕ್ತಿವಹಿಸದೆ ಇರುವುದನ್ನು ಕಂಡ ಅವ್ಯವಹಾರದ ಪ್ರಮುಖ ಸಂಪರ್ಕ ಕೊಂಡಿಯಾಗಿದ್ದ ಫಿನ್‌ಮೆಕಾನಿಕಾ ಸಂಸ್ಥೆಯ ಭಾರತ ಪ್ರತಿನಿಧಿ ಶ್ರೀ ಗಿರೆಸೋಲ್ ಅವರು ಸುಲಭವಾಗಿ ಭಾರತದಿಂದ ನಿರ್ಗಮಿಸಲು ಸಾಧ್ಯವಾಯಿತು.

ತನ್ನ ತಪ್ಪನ್ನು ಒಪ್ಪಿಕೊಳ್ಳುವ ಬದಲು, ರಕ್ಷಣಾ ಸಚಿವಾಲಯ, ಅನಗತ್ಯವಾಗಿ ತಾಂತ್ರಿಕ ಮಾನದಂಡಗಳ ಪ್ರಸ್ತಾಪದೊಂದಿಗೆ ವಿಷಯಾಂತರಕ್ಕೆ ಪ್ರಯತ್ನಿಸುತ್ತಿದೆ ಹಾಗೂ ಎನ್‌ಡಿಎ ಹೆಸರನ್ನು ಎಳೆಯಲು ಯತ್ನಿಸುತ್ತಿದೆ. **ಭ್ರಷ್ಟಾಚಾರ ಮತ್ತು ಲಂಚದ ವಿಚಾರ ಹಾಗೂ ಸೂಕ್ತ ಸಮಯದಲ್ಲಿ ವಿಚಾರಣೆ ನಡೆಸುವಲ್ಲಿ ವಿಫಲವಾದ ಸರ್ಕಾರ, ಜೊತೆಗೆ, ಭಾರತೀಯ ಫಲಾನುಭವಿಗಳನ್ನು ಪತ್ತೆ ಹಚ್ಚುವುದು ಪ್ರಮುಖ ವಿಚಾರಗಳಾಗಿವೆ ಹೊರತು ತಾಂತ್ರಿಕ ಮಾನದಂಡಗಳು ಇಲ್ಲಿ ಅಪ್ರಸ್ತುತ.**

ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಪಿಪಾಸೆಯಲ್ಲಿ ಸಂಪೂರ್ಣ ಮುಳುಗಿದೆ. ಸಿಡಬ್ಲ್ಯುಜಿ, 2ಜಿ, ಕಲ್ಲಿದ್ದಲು, ಸಾಲ ಮನ್ನಾ ಹಾಗೂ ಅನ್ಯ ಹಲವಾರು ಹಗರಣಗಳು ಯುಪಿಎ ಸರ್ಕಾರದ ಅಧಿಕಾರಾವಧಿಯ ಪ್ರಮುಖ ಮೈಲಿಗಲ್ಲಾಗಿವೆ.

ಈ ಸಾಲಿನಲ್ಲಿ ಈಗ ವಿವಿಐಪಿ ಹೆಲಿಕಾಪ್ಟರ್‌ನ ಭಾರಿ ಹಗರಣವು ಸೇರಿದ್ದು, ನಮ್ಮ ದೇಶದ ಶಾಂತಿ ಕದಡಿರುವ ಈ ಹಗರಣದ ಬಗ್ಗೆ ಉತ್ತರಿಸುವ ಜವಾಬ್ದಾರಿ ಹೊಂದಿದೆ. ದೇಶ ಬಯಸುವ ಪ್ರಶ್ನೆಗಳು ಇಂತಿವೆ:–

1. ವಿವಿಐಪಿ ಹೆಲಿಕಾಪ್ಟರ್ ವಹಿವಾಟು ಅಂತಿಮಗೊಳಿಸಿ ಸಹಿ ಹಾಕಿದವರಾರು?

2. ವ್ಯವಹಾರ ಕುದುರಿಸಲು ಲಂಚ ಪಡೆದವರು ಯಾರು?

3. ಇಟಲಿಯ ಆರೋಪ ಪಟ್ಟಿಯಂತೆ ಭಾರತದ ಒಂದು ಕುಟುಂಬ 28 ದಶಲಕ್ಷ ಯೂರೋಸ್ ಪಡೆದ ವಿಚಾರವು ಎರಡು ಜಾಗಗಳಲ್ಲಿ ಪ್ರಸ್ತಾವಗೊಂಡಿದೆ. ಈ ಕುಟುಂಬ ಯಾವುದು ಎಂದು ಈ ದೇಶ ತಿಳಿಯ ಬಯಸುತ್ತದೆ.

೪. ಹಸ್ಚ್ಕೆ ಹಾಗೂ ಎಮಾರ್ ಎಂಜಿಎಫ್ ನಡುವೆ ಇದ್ದ ಸಂಬಂಧಯಾವುದು?

೫. ಹೆಲಿಕಾಪ್ಟರ್ ವ್ಯವಹಾರದಲ್ಲಿ ಐಡಿಎಸ್ ಇಂಡಿಯದ ಸ್ಥಾನಮಾನ ಮತ್ತು ಪಾತ್ರವೇನು?

೬. ಈ ಹಗರಣದ ವಿಚಾರದಲ್ಲಿ ಸರ್ಕಾರ ರೊಗೆಟರಿ ಪತ್ರವನ್ನೇನಾದರು ಪ್ರಕಟಿಸಿದೆಯೆ?

(ಓ.ಪಿ.ಕ್ಷೋಲಿ)

ಮುಖ್ಯ ಕಚೇರಿ ಪ್ರಭಾರಿ